ಅ) ಕೋಲಾರದ ಅರಣ್ಯ ವಿಭಾಗಧಿಕಾರಿ (ಉಪ ಅರಣ್ಯ ಸಂರಕ್ಷಣಾಧಿಕಾರಿ) ಯವರನ್ನು ಉದ್ದೇಶಿಸಿ ಚಿಂತಾಮಣಿ ತಾಲ್ಲೂಕಿನ ತಹಸೀಲ್ದಾರ್‌ರವರು ಬರೆದ ಪತ್ರದ ನಂ. 21 : 81-82, ತಾ॥ 28-10-1983 ಕ್ಕೆ ಕೋಲಾರ ಅರಣ್ಯ ವಿಭಾಗಾಧಿಕಾರಿಯವರು ಉತ್ತರಿಸುತ್ತಾ ಅವರ ಪತ್ರದ ಸಂಖ್ಯೆ : ಎಸ್. ಎ. ಎಸ್. ಮಾಲ್ಕಿ : ಸಿ ಆರ್. 83-84ತಾ॥ 14-12-1983 ರಲ್ಲಿ ಈ ಮರಗಳ ಮೌಲ್ಯ ರೂ. 1,200-00 ಎಂದು ತಿಳಿಸಿರುತ್ತಾರೆ.

ಆ) ಮೇಲೆ ತಿಳಿಸಿರುವಂತೆ ಕೋಲಾರ ಅರಣ್ಯ ವಿಭಾಗಾಧಿಕಾರಿಯವರು ಈ ವಿಷಯದ ಬಗ್ಗೆ ಕ್ರಮವನ್ನು ತೆಗೆದುಕೊಂಡು ಚಿಂತಾಮಣಿ ಶಹಶೀಲ್ದಾರ್‌ರವರಿಗೆ ಉತ್ತರವನ್ನು ಕೊಟ್ಟಿರುತ್ತಾರೆ.

ಇ) ಇಲ್ಲ.

ಈ) ಭೂಮಿಯ ಮಾಲಿಕನು ಮರಗಳ ಮೌಲ್ಯವನ್ನು ಸರ್ಕಾರಕ್ಕೆ ಸಂದಾಯ ಮಾಡಿ ತಹಶೀಲ್ದಾರ್ ರವರು ಮರಗಳನ್ನು ಭೂ ಮಾಲೀಕರಿಗೆ ಒಪ್ಪಿಸುವವರಿಗೆ ಅರಣ್ಯ ಇಲಾಖೆಯು ಮರದ ಫಸಲನು ಕಾನೂನಿನ ಪ್ರಕಾರ ಹರಾಜು ಮಾಡಬೇಕಾಗುತ್ತದೆ.

ಉ) ಮರಗಳನ್ನು ಕಂದಾಯ ಇಲಾಖೆಯು ಭೂಮಾಲೀಕನಿಗೆ ಒಪ್ಪಿಸುವ ಆಜ್ಞೆ ಹೊರಡಿಸಿದ್ದ ನಂತರ ಮತ್ತು ಅಮರಾಯಿ ಮಾರಾಟದ ಪಟ್ಟಿಯಿಂದ ಈ ಮರಗಳನ್ನು ತೆಗೆದ ನಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಮುಂದಿನ ಕ್ರಮ ತೆಗೆದುಕೊಳ್ಳುವರು.

## ಲಿಂಗಸಗೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಳ್ಳುವ ಬಗ್ಗೆ.

277(713) ಶ್ರೀ ಬಸವರಾಜ ಪಾಟೀಲ್ ಅನ್ವರಿ (ಲಿಂಗಸುಗೂರು) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಲಿಂಗಸಗೂರು ತಾಲ್ಲೂಕಿನಲ್ಲಿ 1972 ರಿಂದ ಎಷ್ಟು ರಸ್ತೆಗಳನ್ನು ಲೋಕೋಪಯೋಗಿ ರಸ್ತೆಗಳನ್ನಾಗಿ ಪರಿವರ್ತಿಸಲಾಗಿದೆ ; ಹಾಗಿದ್ದಲ್ಲಿ ಲಿಂಗಸಗೂರುದಿಂದಾ ಗುಡದನಾಳಕ್ಕೆ, ಗುರುಗುಂದದಿಂದ ಕಾಳಾಪುರ ಮತ್ತು ಗುಂತಕಗೋಳಗ್ಯಾ ಮೂಲಕ ಲಿಂಗಸುಗೂರಿಗೆ ವೈದೊಡ್ಡಿಯಿಂದಾ ಯಲಗಟ್ಟಾಗೆ ಕೃಷ್ಣಾ ಮೇಲ್ದಂಡೆ ಯೋಜನೆ ರಸ್ತೆಯಿಂದ ವರೆಬಾಳ ಗೋಮಟ್ಟ ಮೂಲಕ ಅಮರೇಶ್ವರಕ್ಕೆ ಹೋಗುವ ರಸ್ತೆಗಳನ್ನು ಲೋಕೋಪಯೋಗಿ ಇಲಾಖಾ ರಸ್ತೆಗಳನ್ನಾಗಿ ತೆಗೆದುಕೊಳ್ಳುವ ಸಲಹೆ ಸರ್ಕಾರದವರಲ್ಲಿದೆಯೇ ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನಿರಾವರಿ ಸಚಿವರು).--10 ರಸ್ತೆಗಳನ್ನು ಲೋಕೋಪಯೋಗಿ ರಸ್ತೆಗಳನ್ನಾಗಿ ಪರಿವರ್ತಿಸಲಾಗಿದೆ. ಪ್ರತಿ ತಾಲ್ಲೂಕಿನಲ್ಲಿಯೂ ಲೋಕೋಪಯೋಗಿ ಇಲಾಖೆಯ ವಶದಲ್ಲಿಲ್ಲದ ಕೆಲವು ಮುಖ್ಯವಾದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನಾಗಿ ಪರಿವರ್ತಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಈ ಪ್ರಸ್ತಾಪನೆಯನ್ನು ಅಂಗೀಕರಿಸುವ ಸಂದರ್ಭದಲ್ಲಿ ಪ್ರಶ್ನೆಯಲ್ಲಿ ಕಾಣಿಸಿದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

## ರಾಮದುರ್ಗ ತಾಲ್ಲೂಕಿನ ಕಟಿಕೋಳ ಗ್ರಾಮಕ್ಕೆ ಏತ ನೀರಾವರಿ ಯೋಜನೆ

283(821) ಶ್ರೀ ಎಫ್. ಎ ಕೊಪ್ಪದ್ (ರಾಮದುರ್ಗ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಮದುರ್ಗ ತಾಲ್ಲೂಕಿನ ಕಟಿಕೋಳ ಗ್ರಾಮಕ್ಕೆ ಯಾತ ನೀರಾವರಿ ಯೋಜನೆಯ ಬಗ್ಗೆ ಅಂದಾಜು ತಯಾರಿಸಿದ್ದು ನಿಜವೇ ;

ಆ) ಹಾಗಿದ್ದಲ್ಲಿ ಅದರ ಅಂದಾಜು ಮಂಜೂರಾಗಿದೆಯೇ ;

ಇ) ಹಾಗಿಲ್ಲದಿದ್ದಲ್ಲಿ ಸರ್ಕಾರದವರು ಪರ್ಯಾಯ ಯೋಜನೆಯನ್ನೇನಾದರೂ ಪರಿಶೀಲಿಸುತ್ತಿರುವರೇ ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).--

ಅ) ಪ್ರಾರಂಭಿಕ ವರದಿ ಸಿದ್ಧವಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಾರಂಭಿಕ ವರದಿ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್. ಡಿ. ದೇವೇಗೌಡ --ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರ ಬಯಸಿದ ಎಲ್ಲ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

## ಕುದುರೆಮುಖ ಯೋಜನೆ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸುವುದು

257(738) ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).--ಮಾನ್ಯ ಅರಣ್ಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.--

ಅ) ಕುದುರೆಮುಖ ಯೋಜನೆ ಪ್ರದೇಶದಲ್ಲಿ ಕೆಲಸ ಮುಗಿದಿದ್ದು ಭಾರಿ ಪ್ರಮಾಣದಲ್ಲಿ ಅರಣ್ಯ ಭೂಮಿಯು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಅಲ್ಲಿ ಅರಣ್ಯ ಬೆಳೆಸಲು ಇರುವ ತೊಂದರೆಗಳೇನು ;

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).--ಅ) ಬಂದಿದೆ. ಆದರೆ ಅರಣ್ಯ ಪ್ರದೇಶವನ್ನು ಭಾರಿ ಪ್ರಮಾಣದಲ್ಲಿ ಖಾಲಿಯಾಗಲು ಅವಕಾಶ ಕೊಟ್ಟಿಲ್ಲ.

ಆ) ಅವಶ್ಯಕತೆ ಇದ್ದ ಸ್ಥಳಗಳಲ್ಲಿ ಅರಣ್ಯ ಬೆಳೆಸಲು ಪ್ರಯತ್ನ ನಡೆಯುತ್ತಿದೆ.

259(806) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).-- ಮಾನ್ಯ ರಾಜ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ;

ಅ) ಅರಸೀಕೆರೆ ವಿಧಾನಸಭಾ ಕ್ಷೇತ್ರದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ಹಾಗೂ ಅವರ ಅಭಿವೃದ್ಧಿಗೆ ಸರಕಾರದವರು ಕೈಕೊಂಡ ಕ್ರಮವೇನು ;

ಆ) ಖಾಸಗಿಯವರು ಮೇಲ್ಕಂಡ ಜಮೀನನ್ನೇದರೂ ಒತ್ತುವರಿ ಮಾಡಿಕೊಂಡಿರುವರೇ ;

ಇ) ಹಾಗಿದ್ದಲ್ಲಿ ಒತ್ತುವರಿ ಮಾಡಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು ಮತ್ತು ಅವರ ವಿರುದ್ಧ ಕೈಕೊಂಡ ಕ್ರಮವೇನು ?

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).--

ಅ)

| | ಹೆಕ್ಟೇರುಗಳಲ್ಲಿ |
|---|---|
| ರಾಜ್ಯ ಅರಣ್ಯ | 15049-76 |
| ಸಿ ಮತ್ತು ಡಿ ವರ್ಗದ ಭೂಮಿ | 2483-06 |
| ಒಟ್ಟು : | 17532-82 |

ಮೇಲಿನ ಭೂಮಿಗಳ ಪೈಕಿ 1479 ಹೆಕ್ಟೇರುಗಳಲ್ಲಿ ಅರಣ್ಯವನ್ನು ಬೆಳೆಸಲಾಗಿದೆ. ಅಲ್ಲದೆ, ವರ್ಷಕ್ಕೆ ಪ್ರತಿ 100 ಹೆಕ್ಟೇರಿನಲ್ಲಿ ಬೇರೆ ಬೇರೆ ಯೋಜನೆಗಳಲ್ಲಿ ಅಂದರೆ ಎನ್. ಆರ್. ಇ. ಪಿ. ಸಾಮಾಜಿಕ ಅರಣ್ಯ ಡಿ. ಪಿ. ಎ. ಪಿ. ಇವುಗಳಲ್ಲಿ ಅರಣ್ಯ ಬೆಳೆಸಲಾಗುವುದು.

ಆ) ಹೌದು.

ಇ) ಮೇಟಿಕುರ್ಕೆ ರಾಜ್ಯ ಅರಣ್ಯದಲ್ಲಿ 87 08 ಹೆಕ್ಟೇರಿನಷ್ಟು ಪ್ರದೇಶವನ್ನು 94 ಜನರು 27-4-78 ರ ಪೂರ್ವದಲೇ ಅತಿಕ್ರಮಣ ಮಾಡಿಕೊಂಡಿದ್ದು, ಈ ಪ್ರಕರಣಗಳು ಹಾಸನದ ಜಿಲ್ಲಾಧಿಕಾರಿ ಮತ್ತು ಅರಸೀಕೆರೆ ಮುನ್ಸೀಫ್ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಉಳಿದಿದೆ. ಗರುಡನಗಿರಿ ರಾಜ್ಯ ಅರಣ್ಯದಲ್ಲಿ 60-72 ಹೆಕ್ಟೇರಿನಷ್ಟು ಅರಣ್ಯ ಭೂಮಿಯನ್ನು 50 ಜನರು ಅಕ್ರಮಿಸಿಕೊಂಡಿರುತ್ತಾರೆ. ಈ ಅತಿಕ್ರಮಣಗಳು 27-4-1978 ರ ಇತ್ತೀಚೆಗೆ ಸಂಬಂಧಪಟ್ಟವುಗಳು. ಅರಣ್ಯ ಸಂರಕ್ಷಣಾ ಕಾಯಿದೆ 1980 ರ ಪ್ರಕಾರ ಈ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲ. ಕಾನೂನು ರೀತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

## ಭದ್ರಾ ಮೇಲ್ದಂಡೆ ಯೋಜನೆಯ ಮುಳುಗಡೆ ಪ್ರದೇಶದಲ್ಲಿ 'ಅರಣ್ಯ ಸಂಪತ್ತಿಗೆ ಬೆಲೆ ನಿಗದಿ ಪಡಿಸುವುದು

258 (737) ಶ್ರೀ ಪಿ. ತಿಪ್ಪಯ್ಯ.--(ಮೂಡಿಗೆರೆ) ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?